# ವೀರಭಕ್ತ ಗಿರೀಶ್ ಚಂದ್ರ ಘೋಷ್

ಪ್ರವ್ರಾಜಿಕಾ ಪರಮಪ್ರಾಣಾ

**ಬ**ಂಗಾಳದ ನಾಟಕರಂಗದ ಇತಿಹಾಸವನ್ನು ಮೂರು ಭಾಗಗಳಾಗಿ ವಿಭಾಗಿಸುತ್ತಾರೆ. ಈ ಭಾಗಗಳನ್ನು ಆಯಾ ಕಾಲದ ಒಬ್ಬೊಬ್ಬ ಶ್ರೇಷ್ಠ ನಾಟಕಕಾರನ ಯುಗವಾಗಿ ಗುರುತಿಸಲಾಗಿದೆ. ಬಂಗಾಳಿ ನಾಟಕರಂಗದ ಆದಿಯುಗದ ಅತ್ಯಂತ ಮಹತ್ವಪೂರ್ಣ ವ್ಯಕ್ತಿ ಗಿರೀಶ್ ಚಂದ್ರ ಘೋಷ್. ಇಂಗ್ಲಿಷಿನ ಪ್ರಸಿದ್ಧ ನಾಟಕಕಾರರಾದ ಗ್ಯಾರಿಕ್ ಹಾಗೂ ಶೇಕ್ಸ್‌ಪಿಯರ್ – ಈ ಇಬ್ಬರ ಪ್ರತಿಭೆಯನ್ನು ಗಿರೀಶ್‌ನಲ್ಲಿ ಕಂಡು ಸಾಹಿತ್ಯ ಪ್ರೇಮಿಗಳು ಹಾಗೂ ವಿಮರ್ಶಕರು ವಿಸ್ಮಿತರಾಗಿದ್ದರು.



೧೮೪೪, ಫೆಬ್ರವರಿ ೨೮ ನೇ ತಾರೀಖು ಕೊಲ್ಕತಾದ ಬಾಗ್‌ಬಜಾರಿನಲ್ಲಿ ಗಿರೀಶನ ಜನ್ಮ. ಆಗ ಕೊಲ್ಕತಾ ಬ್ರಿಟಿಷ್ ಭಾರತದ ರಾಜಧಾನಿ. ಅದು ಕಲೆ, ವಿಜ್ಞಾನಗಳಲ್ಲಿ ಪ್ರವೀಣರಾದ ಬಹು ಮಂದಿ ವಿದ್ವಾಂಸರ ಜನ್ಮಸ್ಥಾನ. ಬಾಲ್ಯದಿಂದಲೂ ಗಿರೀಶನಿಗೆ ಓದುವ ಹುಚ್ಚು. ಅವನು ಆ ಕಾಲದ ಹೆಸರಾಂತ ಕವಿ ಈಶ್ವರಚಂದ್ರ ಗುಪ್ತನನ್ನು ಅನುಕರಿಸಿ ಕವಿತೆಗಳನ್ನೂ ಬರೆಯ ತೊಡಗಿದನು. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡ ಗಿರೀಶನಿಗೆ ತಾಯಿಯ ಸಾವಿನ ಸ್ಮರಣೆ ಅಳಿಯಲಾರದಂತೆ ಉಳಿದಿತ್ತು. ತನ್ನ 'ಬುದ್ಧದೇವ ಚರಿತ' ನಾಟಕದಲ್ಲಿ ಬುದ್ಧನ ತಾಯಿಯ ಮೃತ್ಯುವನ್ನು ಚಿತ್ರಿಸುವಾಗ ಗಿರೀಶ್ ತನ್ನ ತಾಯಿಯ ಕೊನೆಗಾಲದ ಚಿತ್ರವನ್ನೇ ನೀಡುತ್ತಾನೆ. ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಗಿರೀಶ್ ಸರ್ವದಾ ತನ್ನ ಹಿತೈಷಿಯಾಗಿದ್ದ ತಂದೆಯನ್ನೂ ಕಳೆದುಕೊಂಡನು.

ತಂದೆಯ ಮರಣದ ನಂತರ ಗಿರೀಶನ ಬದುಕು ದಿಕ್ಕು ತಪ್ಪಿತು. ಇಚ್ಛೆ ಬಂದಂತೆ ಅವನು ಶಾಲೆಗಳನ್ನು ಬದಲಿಸಿದನು. ಕಡೆಗೊಮ್ಮೆ ಓದುವುದನ್ನು ಸಂಪೂರ್ಣವಾಗಿ ಕೈಬಿಟ್ಟನು. ತನ್ನನ್ನೂ ತನ್ನ ಪುಟ್ಟ ತಮ್ಮಂದಿರನ್ನೂ ನೋಡಿಕೊಳ್ಳಲು ಬಂದ ಹಿರಿಯ ಅಕ್ಕನನ್ನೂ ಧಿಕ್ಕರಿಸಿ ನಡೆದನು. ಅಕ್ಕ ಕೃಷ್ಣಕಿಶೋರಿ, ೧೮೫೯ ರಲ್ಲಿ ಗಿರೀಶನ ಹದಿನೈದನೇ ವಯಸ್ಸಿನಲ್ಲಿ ನವೀನ ಚಂದ್ರ ಸರ್ಕಾರನ ಮಗಳು ಪ್ರಮೋದಿನಿಯೊಂದಿಗೆ ಗಿರೀಶನ ವಿವಾಹ ನಡೆಸಿದಳು.

ಗಿರೀಶ್ ಚಂದ್ರ ಶಾಲೆಯನ್ನು ತ್ಯಜಿಸಿ ಬೀದಿ ಅಲೆಯಲು ಆರಂಭಿಸಿದ ಮೇಲೆಯೂ ಸಾಹಿತ್ಯಾಭಿರುಚಿ ಅವನನ್ನು ತ್ಯಜಿಸಲಿಲ್ಲ. ಮನೆಯಲ್ಲಿಯೇ ಇದ್ದುಕೊಂಡು ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳನ್ನು ಆಳವಾಗಿ ಅವನು ಅಧ್ಯಯನ ಮಾಡಲಾರಂಭಿಸಿದನು.

ಪೂಜ್ಯ ಮಾತಾಜಿಯವರು ಬಂಗಾಳದ ದಕ್ಷಿಣೇಶ್ವರದಲ್ಲಿ ಇರುವ ಶ್ರೀಶಾರದಾ ಮಠದ ಮುಖ್ಯಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಲೇಖಕರು.

ಗಿರೀಶ್ ಬೆಳೆಯುತ್ತಿದ್ದ ಸಮಯ ಅತ್ಯಂತ ಸಂದಿಗ್ಧವಾದದ್ದು. ಕ್ರಿಶ್ಚಿಯನ್ನರು ಹಿಂದೂಧರ್ಮದ ವಿರುದ್ಧ ಸಾಧ್ಯವಾದಷ್ಟೂ ಅಪಪ್ರಚಾರ ಮಾಡುತ್ತಿದ್ದರು. ಹಿಂದೂಧರ್ಮವೂ ವಿಚಾರವಂತರು ಹೇಸಿಕೊಳ್ಳುವಂಥ ಆಚಾರಗಳು, ಮೇಲುಕೀಳು ಭಾವನೆಗಳಿಂದ ತುಂಬಿಹೋಗಿತ್ತು. ಆಗಿನ ಕಾಲದ ಅನೇಕ ಯುವಕರಂತೆ ಗಿರೀಶನೂ ಹಿಂದೂಧರ್ಮದ ವಿರೋಧಿಯಾಗಿದ್ದನು. ಹಾಗೆ ನೋಡಿದರೆ, ಅವನಿಗೆ ಯಾವ ಧರ್ಮದಲ್ಲಿಯೂ ಶ್ರದ್ಧೆ ಇರಲಿಲ್ಲ. ಪೂಜೆಗೆಂದು ಮನೆಗೆ ತಂದ ದುರ್ಗೆಯ ಪ್ರತಿಮೆಯನ್ನು ಒಡೆದು ಚೂರು ಚೂರು ಮಾಡಿ ಎಸೆದನು; ಬಾಗ್‌ಬಜಾರಿನಲ್ಲಿ ಗೂಂಡಾಗಳ ಗುಂಪೊಂದನ್ನು ಕಟ್ಟಿ ಮದ್ಯಪಾನ ಮುಂತಾದ ದುಶ್ಚಟಗಳ ದಾಸನಾದನು. ಈ ಗುಂಪು ಪುಂಡಾಟದ ಜೊತೆ ಅನೇಕ ಸಮಾಜಸೇವೆಯ ಕೆಲಸಗಳನ್ನು ಮಾಡುತ್ತಿದ್ದರೂ ಜನರು ಆ ಗುಂಪಿನವರನ್ನು ಒಳ್ಳೆಯ ದೃಷ್ಟಿಯಿಂದ ಕಾಣುತ್ತಿರಲಿಲ್ಲ. ಗಿರೀಶನ ದುರ್ನಡತೆ ದಿನದಿನಕ್ಕೆ ಹೆಚ್ಚಾದಂತೆ ಆತನ ಮಾವ ಅವನ ಮನವೊಲಿಸಿ ಬ್ರಿಟಿಷ್ ಕಂಪನಿಯೊಂದರಲ್ಲಿ ಗುಮಾಸ್ತನ ಕೆಲಸವನ್ನು ಕೊಡಿಸಿದನು. ತನ್ನ ಕಾರ್ಯದಕ್ಷತೆಯಿಂದ ಗಿರೀಶ್ ಬಹು ಬೇಗ ಕಂಪನಿಯ ಹಿರಿಯ ಅಧಿಕಾರಿಗಳಿಗೆ ಪ್ರೀತಿಪಾತ್ರನಾದನು.

ಒಮ್ಮೆ ಬಾಗ್‌ಬಜಾರಿನ ವ್ಯಕ್ತಿಯೊಬ್ಬ ಅತ್ಯಂತ ಕಷ್ಟದಿಂದ ನಾಟಕದ ಟಿಕೇಟನ್ನು ಸಂಪಾದಿಸಿ, ಅದನ್ನು ಅವರಿವರಿಗೆ ತೋರಿಸಿ, ಜಂಬ ಕೊಚ್ಚಿಕೊಳ್ಳುತ್ತಿದ್ದುದನ್ನು ಕಂಡ ಗಿರೀಶನಿಗೆ ಆ ವ್ಯಕ್ತಿಯ ಮೇಲೆ ಕನಿಕರವುಂಟಾಯಿತು. ಸಾಮಾನ್ಯ ಜನರ ಮನೋರಂಜನೆಗಾಗಿ ತಾನೊಂದು ನಾಟಕಶಾಲೆಯನ್ನು ತೆಗೆಯಬೇಕೆಂಬ ವಿಚಾರ ಆತನ ಮನಸ್ಸಿಗೆ ಬಂದಿತು.

ಆ ಕಾಲದಲ್ಲಿ ಬ್ರಿಟಿಷ್ ಕಲಾರಸಿಕರ ಪ್ರೋತ್ಸಾಹದಿಂದ ಶ್ರೀಮಂತರ ಮನೆಗಳಲ್ಲಿ ಆಗಾಗ ನಾಟಕಾಭಿನಯವಾಗುತ್ತಿತ್ತು. ಬಂಗಾಳಿಯಲ್ಲಿ ಆಗ ಹೇಳಿಕೊಳ್ಳುವಂಥ ನಾಟಕ ಸಾಹಿತ್ಯವಿರಲಿಲ್ಲ. ಶೇಕ್ಸ್‌ಪಿಯರನ ಇಂಗ್ಲಿಷ್ ನಾಟಕಗಳನ್ನು ನೋಡಿ ಬಂಗಾಳಿ ರಸಿಕರು ತೃಪ್ತಿಪಡುತ್ತಿದ್ದರು. ಸಾಮಾನ್ಯ ಜನರು ಬಯಲಾಟಗಳಲ್ಲಿ ಮನೋರಂಜನೆ ಪಡೆಯುತ್ತಿದ್ದರು. ನಾಟಕರಂಗದ ಅಲಂಕಾರ, ನಟರ ವೇಷಭೂಷಣಗಳಿಗೆ ಶ್ರೀಮಂತರು ಅಪಾರ ಹಣ ಸುರಿಯುತ್ತಿದ್ದರು. ಸಾಮಾನ್ಯ ಜನರು ಟಿಕೆಟ್ ಪಡೆದು ಶ್ರೀಮಂತರ ಮನೆಗಳಲ್ಲಿ ನಾಟಕ ನೋಡುವುದು ದೂರದ ಮಾತಾಗಿತ್ತು.

೧೮೬೭ ರಲ್ಲಿ, ತನ್ನ ೨೩ ನೇ ವಯಸ್ಸಿನಲ್ಲಿ, ಗಿರೀಶ್ ಚಂದ್ರ ತನ್ನ ಪರಿಚಯದ ಕೆಲವು ಯುವಕರನ್ನು ಸೇರಿಸಿ ಬಯಲಾಟದ ಗುಂಪೊಂದನ್ನು ಕಟ್ಟಿದನು. ಮೈಕೆಲ್ ಮಧುಸೂದನನ 'ಶರ್ಮಿಷ್ಠಾ' ನಾಟಕವನ್ನು ಅಭಿನಯಕ್ಕೆ ಆರಿಸಿಕೊಳ್ಳಲಾಯಿತು. ಇದಕ್ಕೆ ಬೇಕಾದ ಹಾಡುಗಳನ್ನು ಗಿರೀಶ್ ತಾನೇ ರಚಿಸಿದನು. ಈ ನಾಟಕ ಜನಪ್ರಿಯವಾದುದನ್ನು ಕಂಡು ಗಿರೀಶ್, 'ಗೃಹಿಣಿಯ ಏಕಾದಶಿ' ಎಂಬ ಸಾಮಾಜಿಕ ನಾಟಕವೊಂದನ್ನು ಆರಿಸಿಕೊಂಡನು ಹಾಗೂ ತಾನೇ ಮೊದಲ ಬಾರಿಗೆ ಅಭಿನಯಕ್ಕೆ ಇಳಿದನು. ಈ ನಾಟಕ ಸಮಾಜದಲ್ಲಿ ಒಂದು ಆಂದೋಲನವನ್ನೇ ಉಂಟುಮಾಡಬಹುದೆಂಬ ಅರಿವು ಗಿರೀಶನಿಗೆ ಆಗ ಇರಲಿಲ್ಲ. ಆಗ ಅವನ ವಯಸ್ಸು ಕೇವಲ ೨೫ ವರ್ಷ. ಗಿರೀಶನ ಅಭಿನಯ ಕೌಶಲ ಪ್ರೇಕ್ಷಕರನ್ನು ಮುಗ್ಧರನ್ನಾಗಿ ಮಾಡಿತು. ಈ ಬಗ್ಗೆ 'ಬೆಂಗಾಲಿ' ಪತ್ರಿಕೆ ಹೀಗೆ ಬರೆಯುತ್ತದೆ: "…. ಈ ಅಭಿನಯದ ನಂತರ ಆ ಒಂದೇ ರಾತ್ರಿಯಲ್ಲಿ ಗಿರೀಶ್ ಚಂದ್ರನು ವಿಖ್ಯಾತ ನಟನಾಗಿ ಮಾರ್ಪಟ್ಟನು."

ಈ ನಾಟಕವನ್ನು ವೀಕ್ಷಿಸಿದ್ದ ಹೈಕೋರ್ಟಿನ ನ್ಯಾಯಾಧೀಶ ಶಾರದಾಚರಣ ಮಿತ್ರರು, ಗಿರೀಶನನ್ನು 'ಬಂಗಾಳದ ನವ್ಯ ನಾಟಕಗಳ ಸೃಷ್ಟಿಕರ್ತ' ಎಂದರಲ್ಲದೆ, "ಇಲ್ಲಿಂದ ಮುಂದಿನ ೫೦ ವರ್ಷಗಳು ಬಂಗಾಳದ ಸಾಂಸ್ಕೃತಿಕ ಜೀವನದ ಈ ಒಂದು ಕಾಲಘಟ್ಟಕ್ಕೆ ಗಿರೀಶನೇ ನಾಯಕ…." ಎನ್ನುತ್ತಾರೆ. ಆಧುನಿಕ ಯುಗದ ಹೆಸರಾಂತ ಲೇಖಕನಾಗಿದ್ದ ಗಿರೀಶ, ತನ್ನ ಮಿತ್ರರ ಸಹಕಾರದಿಂದ ಒಂದು ರಂಗಮಂಟಪವನ್ನು ಕಟ್ಟಿ ಅದಕ್ಕೆ, 'ನ್ಯಾಷನಲ್ ಥಿಯೇಟರ್' ಎಂದು ಹೆಸರಿಟ್ಟನು. ನಾಟ್ಯಾಚಾರ್ಯ ಅಮೃತಲಾಲ ಬಸು ಹೇಳುತ್ತಾರೆ, "ವಂಗ ಸಾಹಿತ್ಯ ಪ್ರಪಂಚದಲ್ಲಿ ಈ ವರ್ಷ ಅತ್ಯಂತ ವಿಶಿಷ್ಟವಾದದ್ದು. ಈ ವರ್ಷವೇ ಕೇಶವಚಂದ್ರರ **ಸುಲಭ ಸಮಾಚಾರ** ಪತ್ರಿಕೆ, ಬಂಕಿಮಚಂದ್ರರ **ವಂಗದರ್ಶನ** ಹಾಗೂ ನ್ಯಾಷನಲ್ ಥಿಯೇಟರ್ ಆರಂಭಗೊಂಡದ್ದು."

ಬಂಗಾಳಿ ನಾಟಕ ರಂಗದ ಹೊಸ ಇತಿಹಾಸ ಇಲ್ಲಿಂದಲೇ ಆರಂಭವಾಯಿತು. ನ್ಯಾಷನಲ್ ಥಿಯೇಟರ್ ಹೆಸರು ವಾಸಿಯಾದಂತೆಲ್ಲ, ಜನರು ನಿಂತುಕೊಂಡು ನೋಡಲೂ ನಾಟಕಶಾಲೆಯಲ್ಲಿ ಜಾಗ ಸಿಗದಂತಾಯಿತು. ಆಗ ಟಿಕೆಟ್ ಮಾರಿ ನಾಟಕವನ್ನು ತೋರಿಸುವ ತನ್ನ ಸ್ನೇಹಿತರ ನಿರ್ಧಾರವನ್ನು ಗಿರೀಶ್ ವಿರೋಧಿಸಿದನು. ತನ್ನ ನಾಟಕಾಲಯದ ರಂಗಮಂಟಪ ಹಾಗೂ ನಟರ ಅಲಂಕಾರಗಳು ತೀರ ಸಾಧಾರಣವಾಗಿರುವಾಗ ಜನರಿಂದ ಹಣ ಪಡೆಯುವ ಅಗತ್ಯವೇನೆಂದು ಅವನ ವಾದ. ಗೆಳೆಯರು ತನ್ನ ಮಾತನ್ನು ಕೇಳದಿದ್ದಾಗ, ತನ್ನಿಂದಲೇ ಪ್ರಸಿದ್ಧಿಗೆ ಬಂದಿದ್ದ ಆ ನಾಟಕಾಲಯವನ್ನು ಗಿರೀಶ್ ತ್ಯಜಿಸಿದನು. ಕಡೆಗೆ ಸ್ನೇಹಿತರ ಒತ್ತಾಯಕ್ಕೆ ಮಣಿದು ಹೊರಗಿನಿಂದಲೇ ಅದಕ್ಕೆ ಸಹಾಯಮಾಡಲಾರಂಭಿಸಿದನು.

ಗಿರೀಶನ ವೈಚಾರಿಕತೆ ಆತನ ಕಾಲದ ಕಟ್ಟನ್ನು ಮೀರಿ ಬೆಳೆದಿತ್ತು. ಸಮಕಾಲೀನ ಜನರ ಮಾನಸಿಕ ಬೆಳವಣಿಗೆಯನ್ನು ಗಮನಿಸಿ, ಅವರ ಮಟ್ಟಕ್ಕೆ ಇಳಿದು, ಗಿರೀಶ್ ನಾಟಕಗಳನ್ನು ಬರೆಯಬೇಕಾಗಿತ್ತು. ಸಮಕಾಲೀನ ಸಮಾಜದ ರೀತಿನೀತಿಗಳತ್ತ ಆತ ತೀಕ್ಷ್ಣವಾದ ಲಕ್ಷ್ಯವನ್ನು ಹೊಂದಿದ್ದನು.

ಅಂದಿನ ಕಾಲದಲ್ಲಿ ಬ್ರಾಹ್ಮಸಮಾಜದ ನಾಯಕ ಕೇಶವಚಂದ್ರ ಸೇನನ ವ್ಯಕ್ತಿತ್ವಕ್ಕೆ ಮಾರುಹೋಗದ ಬಂಗಾಳಿ ಯುವಕರಿರಲಿಲ್ಲ. ಗಿರೀಶನೂ ಒಮ್ಮೆ ಕೇಶವನ ಉಪನ್ಯಾಸ ಕೇಳಲು ಹೋಗಿದ್ದನು. ಪೂರ್ವ ಬಂಗಾಳದ ಒಬ್ಬ ಬ್ರಾಹ್ಮ ಪ್ರಚಾರಕನನ್ನು ಕುರಿತು ಕೇಶವ ಚಂದ್ರ ನಿಂದೆ ಮಾಡಿದ್ದನ್ನು ಕೇಳಿ ಗಿರೀಶನ ಮನಸ್ಸು ಪೆಚ್ಚಾಯಿತು. ತನ್ನ ಗುಂಪಿನವನೇ ಆದ ವ್ಯಕ್ತಿಯನ್ನು ಇತರರ ಎದುರಿಗೆ ತೆಗಳುವುದು ಹೀನಬುದ್ಧಿ ಎನ್ನಿಸಿ ಗಿರೀಶ್ ಬ್ರಾಹ್ಮಸಮಾಜಕ್ಕೆ ಹೋಗುವುದನ್ನು ಕೈಬಿಟ್ಟನು. ಬ್ರಾಹ್ಮಣ ಪೂಜಾರಿಗಳ ಆಚಾರ ವಿಚಾರಗಳಲ್ಲಿ ಕಾಣುವ ಕಪಟತೆ, ಕ್ರಿಶ್ಚಿಯನ್ ಮಿಶನರಿಗಳು ಮಾಡುತ್ತಿದ್ದ ಪರಮತ ನಿಂದೆ ಇತ್ಯಾದಿಗಳನ್ನು ಗಮನಿಸುತ್ತಿದ್ದ ಗಿರೀಶ್, ಇವರೆಲ್ಲರಿಗಿಂತ ನಾಸ್ತಿಕರೇ ಉತ್ತಮ ಎಂಬ ನಿರ್ಧಾರಕ್ಕೆ ಬಂದನು. ಗಿರೀಶನ ಈ ಅವಧಿಯ ಜೀವನದಲ್ಲಿ ಕಂಡುಬರುವ ಅಂಕೆಯಿಲ್ಲದ ಬದುಕು, ನಾಸ್ತಿಕತೆ, ವಿಧ್ವಂಸಕ ಮನೋಭಾವ ಆತನ 'ಕಾಲಾಪಾಹಾಡ್' ಎಂಬ ನಾಟಕದಲ್ಲಿ ಅಭಿವ್ಯಕ್ತವಾಗಿದೆ. ಪ್ರಾಪಂಚಿಕ ವಸ್ತುಗಳನ್ನು ಉಪಭೋಗಿಸುವ ಪ್ರಯತ್ನದಲ್ಲಿ ವಾಸ್ತವ ಜೀವನದ ಹೊಡೆತಗಳನ್ನು ಎದುರಿಸಲಾಗದೆ ತತ್ತರಿಸಿ, "ಇದರೊಳಗೆ ಶಾಶ್ವತವಾದದ್ದು ಏನೂ ಇಲ್ಲವೆ?" ಎಂದು ಕಾತರಿಸುವ ಕಾಲಾಪಾಹಾಡ್ ಎಂಬ ಪಾತ್ರದ ಕೂಗು, ಗಿರೀಶನ ಆಗಿನ ಮಾನಸಿಕ ಹೋರಾಟದ ಪ್ರತಿಬಿಂಬವೇ ಆಗಿತ್ತು.

ಗಿರೀಶ್ ಚಂದ್ರ ಸಮಾಜದಲ್ಲಿ ಗೌರವಯುತ ಜೀವನವನ್ನು ನಡೆಸಲಿಲ್ಲ. ಆತನ ಮಿತಿಮೀರಿದ ಮದ್ಯಪಾನ, ಒರಟು ಮಾತುಗಳು ಹಾಗೂ ಗೊತ್ತುಗುರಿಯಿಲ್ಲದ ಜೀವನವನ್ನು ಕಂಡ ಸದ್ಗೃಹಸ್ಥರು ಆತನಿಂದ ದೂರವಿರಲು ಯತ್ನಿಸುತ್ತಿದ್ದರು. ಇಷ್ಟಾದರೂ ಜೀವನದ ಮೌಲ್ಯಗಳ ಬಗ್ಗೆ ಆತನಿಗೆ ಇತರರಿಗಿಂತ ಹೆಚ್ಚಾಗಿಯೇ ಅರಿವಿತ್ತು. ತಾರುಣ್ಯಕ್ಕೆ ಕಾಲಿಡುತ್ತಿರುವಾಗಲೇ ತಂದೆಯನ್ನು ಕಳೆದುಕೊಂಡ ಆತ, ತನ್ನ ಪ್ರೀತಿಯ ತಂಗಿ ಮತ್ತು ತಮ್ಮಂದಿರ ಭವಿಷ್ಯದ ಬಗ್ಗೆ ಚಿಂತೆಗೀಡಾಗಿದ್ದನು. ತನ್ನ ನಿರಂಕುಶವಾದ ಬದುಕಿನಿಂದ ತನ್ನ ಕುಟುಂಬದ ಜನಗಳಿಗೆ ಕಷ್ಟ ಕೊಟ್ಟಿದ್ದಲ್ಲದೆ, ತಾನೂ ಒಳಗೊಳಗೇ ಸಂಕಷ್ಟಮಯವಾದ ಮಾನಸಿಕ ಹೋರಾಟಕ್ಕೆ ಒಳಗಾಗಿದ್ದನು.

ಗಿರೀಶನ ಸ್ನೇಹಿತ ಕಾಳೀನಾಥ ಬಸು ಬ್ರಿಟಿಷ್ ಭಾರತದ ಮೊಟ್ಟಮೊದಲ ಹಿಂದೂ ಪೋಲೀಸ್ ಸೂಪರಿಂಟೆಂಡೆಂಟ್. ಆತ ೧೪.೨.೧೮೬೭ ರ ತನ್ನ ದಿನಚರಿಯಲ್ಲಿ ಗಿರೀಶ ಘೋಷನ ವಿಚಾರ ವಾಗಿ ಹೀಗೆ ಬರೆದಿದ್ದಾನೆ: "ಗಿರೀಶ್‌ನೊಡನೆ ನೈತಿಕ ಜೀವನದ ಬಗ್ಗೆ ಮಾತುಕತೆ ನಡೆಯಿತು. ಆಗ ಗಿರೀಶ್ ತಾನು ಕೆಟ್ಟ ದಾರಿಗೆ ಇಳಿದು ತನ್ನ ಬದುಕನ್ನು ಹಾಳುಮಾಡಿಕೊಳ್ಳುತ್ತಿರುವುದಾಗಿ ಒಪ್ಪಿಕೊಂಡನು. ತನ್ನನ್ನು ತಿದ್ದಿಕೊಳ್ಳಲು ವ್ಯಾಕುಲನಾಗಿದ್ದನು. .....ದೇವರ ಇರುವಿಕೆ ಯಲ್ಲಿ ತನಗೆ ನಂಬಿಕೆ ಇಲ್ಲ ಎಂದವನು, ಮಾತಿನ ನಡುವೆ, ದೇವರ ಮೇಲೆ ನಿರ್ಭರನಾಗಿ ಬದುಕುವುದರಲ್ಲೇ ನಿಜವಾದ ಆನಂದವಿದೆ ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದನು." ತನ್ನ ಸ್ನೇಹಿತನೊಳಗೆ ನಡೆಯುತ್ತಿದ್ದ ಮಾನಸಿಕ ಸಂಘರ್ಷದ ಸುಳಿವು ಸಿಕ್ಕ ಕಾಳೀನಾಥ, ಗಿರೀಶನಿಗಾಗಿ ಮಮ್ಮಲ ಮರುಗಿದನು.

ಗಿರೀಶನ ೩೦ ನೇ ವಯಸ್ಸಿನಲ್ಲಿ ಅವನ ಎರಡನೆಯ ಅಕ್ಕ ಹಾಗೂ ಅಕ್ಕರೆಯ ತಮ್ಮನ ಅಕಾಲ ಮೃತ್ಯುವಾಯಿತು. ಅದರಿಂದ ಚೇತರಿಸಿಕೊಳ್ಳುವಷ್ಟರಲ್ಲಿ, ಆತನ ಪತ್ನಿ ಕೂಡ ಕಾಯಿಲೆಯಿಂದ ಹಾಸಿಗೆ ಹಿಡಿದಳು. ತನ್ನ ಕೆಲಸಗಳನ್ನೆಲ್ಲಾ ಕೈಬಿಟ್ಟು ಗಿರೀಶ್ ಹಗಲಿರುಳು ಆಕೆಯ ಶುಶ್ರೂಷೆಯನ್ನು ಮಾಡಿದರೂ ಆಕೆಯನ್ನು ಉಳಿಸಿಕೊಳ್ಳುವುದು ಅವನಿಗೆ ಸಾಧ್ಯವಾಗಲಿಲ್ಲ. ಇದೇ ಸಮಯದಲ್ಲಿ ಗಿರೀಶ್ ಕೆಲಸಮಾಡುತ್ತಿದ್ದ ಕಂಪೆನಿಯ ಮ್ಯಾನೇಜರ್ ಆಚ್‌ಕಿನ್ಸನ್, ತನ್ನ ಸಹಕಾರಿಯೊಬ್ಬನ ಕುತಂತ್ರಕ್ಕೆ ಒಳಗಾಗಿ ಕೆಲಸವನ್ನು ಬಿಟ್ಟು ಇಂಗ್ಲೆಂಡಿಗೆ ಮರಳಿಹೋದನು. ಬಹುಬೇಗ ವ್ಯಾಪಾರ ನಷ್ಟವಾಗಿ ಈ ಕಂಪನಿ ಮುಚ್ಚಿಹೋಯಿತು. ಆಚ್‌ಕಿನ್ಸನ್ ಗಿರೀಶನನ್ನು ತನ್ನ ಸ್ವಂತ ಮಗನಂತೆ ಕಾಣುತ್ತಿದ್ದನು.

ಈ ಸಮಯದಲ್ಲಿ ಗಿರೀಶ್ ಬರೆದ ಕವಿತೆಗಳಲ್ಲಿ ದುಃಖ, ಶೋಕಗಳ ಛಾಯೆಯನ್ನು ನಾವು ಕಾಣಬಹುದು. ಜಗತ್ತನ್ನು ಲೆಕ್ಕಿಸದೆ ಅಲೆದಾಡಿಕೊಂಡಿದ್ದ ಈ ಯುವಕ, ಜೀವನದ ಹೊಡೆತಗಳಿಗೆ ಸಿಕ್ಕು ಜರ್ಝರಿತನಾದನು. "ಹೇ ಈಶ್ವರ, ನೀನಿರುವುದು ಸತ್ಯವಾದರೆ ನನಗೆ ದಾರಿ ತೋರಿಸು" ಎಂಬ ಕೂಗು ಅವನ ಅಂತರಾಳದಿಂದ ಹೊಮ್ಮಲಾರಂಭಿಸಿತು. ಈ ಸಮಯದಲ್ಲಿ ಆತ ನಾಟಕರಂಗದಿಂದ ದೂರವೇ ಇದ್ದರೂ, ನಾಟಕರಂಗ ಆತನಿಲ್ಲದೆ ಮುಂದುವರಿಯ ಲಾರದ ಪರಿಸ್ಥಿತಿಗೆ ಬಂದಿತ್ತು. ಸ್ನೇಹಿತರ ಒತ್ತಾಯಕ್ಕೆ ಮಣಿದು ಆತ ಅವರಿಗೆ ಸಹಾಯಕನಾಗಿ ನಿಂತನು. 'ಮೇಘನಾದ ವಧೆ' ನಾಟಕದಲ್ಲಿ ರಾಮ ಹಾಗೂ ಮೇಘನಾದ – ಈ ಎರಡು ವಿರುದ್ಧ ಚಾರಿತ್ರ್ಯಗಳುಳ್ಳ ಪಾತ್ರಗಳಲ್ಲಿನ ಗಿರೀಶನ ಅಭಿನಯವನ್ನು ನೋಡಿ ವೀಕ್ಷಕರು ಸ್ತಂಭೀಭೂತರಾದರು.

೧೦.೨.೧೮೭೯ ರ 'ಸಾಧಾರಣಿ' ಪತ್ರಿಕೆ ಗಿರೀಶನನ್ನು 'ವಂಗ ದೇಶದ ಅಲಂಕಾರ' ಎಂದು ಕರೆಯಿತು. ಗಿರೀಶ್ ಬಂಗಾಳಕ್ಕೆ ಅನು ವಾದಿಸಿ ಅಭಿನಯಕ್ಕೆ ತಂದ 'ಮ್ಯಾಕ್‌ಬೆತ್' ನಾಟಕವನ್ನು ಪ್ರಶಂಸೆ ಮಾಡುತ್ತ 'ಹಿಂದು ಪೇಟ್ರಿಯಟ್' ಪತ್ರಿಕೆ ಗಿರೀಶನನ್ನು, 'Father of the modern stage of Bengal' ಎಂದು ಕರೆಯಿತು. ಸುಪ್ರಸಿದ್ಧ ಲೇಖಕರಾದ ಡಿ.ಆರ್. ರಾಯ್ ಹಾಗೂ ಕವಿ ನವೀನ್ ಸೇನ್, ಗಿರೀಶನ ಪ್ರತಿಭೆ ಹಾಗೂ ಅಭಿನಯಗಳಿಗೆ ಮನಸೋತು, "ನಾವು ಗಿರೀಶನ ಗುಲಾಮರಾಗಿಹೋದೆವು" ಎನ್ನುತ್ತಾರೆ.

ಅನಂತರ, ನ್ಯಾಷನಲ್ ಥಿಯೇಟರ್ ಪ್ರತಾಪಚಂದ್ರ ಜುಹುರಿ ಎಂಬ ವ್ಯಾಪಾರಿಯ ಕೈಸೇರಿತು. ಆತ ಗಿರೀಶನನ್ನು ಥಿಯೇಟರಿನ ಮ್ಯಾನೇಜರ್ ಆಗುವಂತೆ ಒತ್ತಾಯಿಸಲಾರಂಭಿಸಿದನು. ಕಲಾವಿದರಿಗೆ ನಿಯಮಿತವಾಗಿ ವೇತನ ಕೊಡುವುದಾಗಿ ಹೇಳಿ ಆತ ಗಿರೀಶನ ಮನವೊಲಿಸಿದನು. ಪ್ರತಾಪಚಂದ್ರನಂಥ ತೀಕ್ಷ್ಣಬುದ್ಧಿಯ ವ್ಯಾಪಾರಿಯ ಹಣದಿಂದ ನಾಟಕಮಂಡಲಿಯು ಚೆನ್ನಾಗಿಯೇ ವರ್ಧ ಮಾನಕ್ಕೆ ಬರುವುದೆಂದು ಅರಿತ ಗಿರೀಶ್, ಇದರಿಂದ ಆಗುವ ಸಾಧಕಬಾಧಕಗಳನ್ನು ಕುರಿತು ಚಿಂತಿಸಿದನು. ಅದರಲ್ಲೂ ಸಮಾಜದ ದೃಷ್ಟಿಯಲ್ಲಿ ನಿಕೃಷ್ಟರೆಂದು ಪರಿಗಣಿತರಾಗಿರುವ ನಟಿಯರು ನಿಯಮಿತ ಸಂಬಳವನ್ನು ಪಡೆದು ಗೌರವಯುತ ಜೀವನವನ್ನು ನಡೆಸಬಹುದೆಂದು ಯೋಚಿಸಿದ ಗಿರೀಶ್, ತಾನು ೧೫೦ ರೂಪಾಯಿ ವೇತನ ಪಡೆಯುತ್ತಿದ್ದ ಪಾರ್ಕರ್ ಕಂಪನಿಯನ್ನು ತ್ಯಜಿಸಿ, ನಾಟಕರಂಗದ ಉನ್ನತಿಗೆ ತನ್ನ ಜೀವನವನ್ನು ಸಂಪೂರ್ಣವಾಗಿ ಮುಡಿಪಾಗಿಟ್ಟನು.

ಗಿರೀಶ್ ಮತ್ತೆ ನಾಟಕ ಮಂಡಲಿಗೆ ಪುನರುಜ್ಜೀವನ ಕೊಟ್ಟಾಗ ಅಭಿನಯಿಸಲು ಒಳ್ಳೆಯ ನಾಟಕಗಳಿರಲಿಲ್ಲ. ಹೀಗಾಗಿ ನಾಟಕ ಬರೆದುಕೊಟ್ಟ ಸಾಹಿತಿಗೆ ಬಹುಮಾನ ಕೊಡುವುದಾಗಿ ಅವನು ಘೋಷಿಸಿದನು. ಅನಂತರ ತಾನೇ ಕೆಲವು ನಾಟಕಗಳನ್ನು ಬರೆದು ಅಭಿನಯಕ್ಕೆ ತಂದನು. 'ಮಾಯಾ ತರು' ಎಂಬ ನಾಟಕಕ್ಕೆ ಅವನು ಬರೆದ ಹಾಡುಗಳನ್ನು ಆಲಿಸಿದ ಬ್ರಾಹ್ಮಸಮಾಜದ ಉಪಾಸಕ ಆಚಾರ್ಯ ರಾಜನಾರಾಯಣ ಬಸು, "ಈ ಹಾಡುಗಳನ್ನು ರಚಿಸಿದವನು ಒಬ್ಬ ಮೇಲ್ಮಟ್ಟದ ವ್ಯಕ್ತಿ. ಈತ ಬ್ರಹ್ಮಜ್ಞಾನವನ್ನು ಪಡೆಯುತ್ತಾನೆ" ಎಂದಿದ್ದನು.

ಧ್ವನಿವರ್ಧಕಗಳಿಲ್ಲದ ಆ ಕಾಲದಲ್ಲಿ ನಟರು ಜೋರಾಗಿ ಕೂಗಿ ಮಾತನಾಡಬೇಕಾಗಿತ್ತು. ಗಿರೀಶ್ ಪದ್ಯ, ಗದ್ಯಗಳ ನಡುವಿನ ಭಾಷೆಯಲ್ಲಿ ನಾಟಕಗಳನ್ನು ರಚಿಸಿದನು. ಇದರಿಂದ, ಕೂಗಿ ಮಾತ ನಾಡುವಾಗಲೂ ಭಾಷೆಯ ಸೌಂದರ್ಯ ಹಾಗೂ ಲಾಲಿತ್ಯಗಳು ನಷ್ಟವಾಗುತ್ತಿರಲಿಲ್ಲ. ಗಿರೀಶನು ಬಳಸಿದ ಛಂದಸ್ಸು 'ಗೈರೀಶಿ ಛಂದ' ಎಂದೇ ಹೆಸರಾಯಿತು. ಬಯಲಾಟಗಳ ಭಾಷೆಯಲ್ಲಿನ ಗ್ರಾಮ್ಯತೆ ಹಾಗೂ ಅತಿರೇಕಗಳನ್ನು ವರ್ಜಿಸಿ, ಆತ ನಾಟಕದ ಭಾಷೆ ಯನ್ನು ಸುಸಂಸ್ಕೃತವನ್ನಾಗಿ ಮಾಡಿದನು. ನಾಟಕರಂಗವನ್ನು ಜೀವಂತವಾಗಿಡಲು ಪ್ರತಿ ವಾರಕ್ಕೆ ಒಂದರಂತೆ ಹೊಸ ನಾಟಕವನ್ನು ರಚಿಸಿ ಅಭಿನಯಕ್ಕೆ ತರಬೇಕಿತ್ತು. ಗಿರೀಶ್ ಮನಸ್ಸಿನಲ್ಲಿ ಸ್ಫುರಿಸಿದ್ದನ್ನು ಬಾಯಿಯಲ್ಲಿ ಹೇಳಿಕೊಂಡು ಹೋಗುತ್ತಿದ್ದನು. ಅದೇ ಸಮಯಕ್ಕೆ ಅತ್ತಿಂದಿತ್ತ ನಡೆದಾಡುತ್ತ ಅಭಿನಯವನ್ನೂ ಮಾಡುತ್ತಿದ್ದನು. ಅವನ ಸಹಾಯಕರು ಅದನ್ನು ಬರೆದುಕೊಳ್ಳುತ್ತಿದ್ದರು. ಗಿರೀಶನು ಹೇಳುವ ವೇಗಕ್ಕೆ ಸರಿಯಾಗಿ ಅವರು ತಮ್ಮ ಕೈಯನ್ನೂ ಬುದ್ಧಿಯನ್ನೂ ಓಡಿಸಬೇಕಾಗಿತ್ತು. ಮಧ್ಯದಲ್ಲಿ ಪ್ರಶ್ನೆ ಎತ್ತಿದರೆ ಆತನ ರಚನೆ ನಿಂತು ಹೋಗಿ, ಆತ ರೇಗಿ ಆರ್ಭಟಿಸುತ್ತಿದ್ದನು. ಗಿರೀಶನಿಗೆ ಈ ರೀತಿ ನಾಟಕಗಳನ್ನು ಬರೆಯಲು ಸಹಾಯ ಮಾಡುತ್ತಿದ್ದ ಅಮೃತ ಲಾಲ ಬಸು ಹೇಳುತ್ತಾರೆ : " ....ಒಮ್ಮೊಮ್ಮೆ ಇಡೀ ರಾತ್ರಿ ಈ ರೀತಿ ನಾಟಕ ಬರೆಯುವುದರಲ್ಲಿಯೇ ಕಳೆದುಹೋಗುತ್ತಿತ್ತು....."

*(ಮುಂದುವರಿಯುವುದು)*